ಶ್ರೀ ಎ. ಶಂಕರ ಆಳ್ವ .—ಕೆಲವು ವಿಷಯಗಳು ನಮ್ಮ ತಿಳಿವಳಿಕೆಗೆ ಬಂದಿದೆ. ಅದರ ಬಗ್ಗೆ ರಿಜಿಸ್ಟ್ರಾರವರಿಗೆ ಆದೇಶ ಕೊಟ್ಟಿದ್ದೇವೆ ಯಾವ್ಯಾವ ಸೊಸೈಟಿಗಳು ಕೆಲಸ ಮಾಡುವುದಿಲ್ಲವೋ ಅವುಗಳನ್ನು ಲಿಕ್ವಿಡೇಟ್ ಮಾಡಬೇಕೆಂದು ಹೇಳಿದ್ದೇವೆ. ಕೆಲವು ಸೊಸೈಟಿಗಳಲ್ಲಿ ಪ್ರೊಸೀಡಿಂಗ್ಸ್ ಪ್ರಾರಂಭವಾಗಿವೆ

ಶ್ರೀ ಎಚ್. ಎಸ್. ಸಿದ್ದಪ್ಪ .—೧೧ ಸೊಸೈಟಿಗಳು ಯಾವುವು ಅಂದರೆ ಮಾಹಿತಿ ಇಲ್ಲವೆ ಹೇಳುತ್ತಾರೆ ಎಷ್ಟು ವರ್ಷಗಳಿಂದ ಆಗುತ್ತಿದೆ ಅಂದರೆ, ವಿವರ ಇಲ್ಲವೆಂದು ಹೇಳುತ್ತಿದಾರೆ. ಅಂದರೆ ಅದರ ಮಾಹಿತಿ ಯನ್ನು ಮಂತ್ರಿಯವರು ಕೊಡಬೇಡವೇ ?

ಶ್ರೀ ಎ. ಶಂಕರ ಆಳ್ವ .—ಮಾಹಿತಿ ಬೇಕಾದರೆ ಕೊಡಬಹುದು. ಯಾವ ಸೊಸೈಟಿ ಎಂದರೆ ಹೇಳಬಹುದು.

ಶ್ರೀ ಕೆ. ಎಚ್. ಕುರಡಗಿ .—ಶ್ಯಾರ್ ಕ್ಯಾಪಿಟಲ್ ರೂ. ೯೬೨–೩೦ ಎಂದು ಹೇಳಿದ್ದೀರಿ. ಈ ರೂ. ೯೬೨–೩೦ ಜಮಾ ಇದೆಯೊ ಹೇಗೆ ?

ಶ್ರೀ ಎ. ಶಂಕರ ಆಳ್ವ .—ರಿಪೋರ್ಟು ಬರಲಿಲ್ಲ. ರಿಪೋರ್ಟು ಬಂದ ಮೇಲೆ ಅವೆಲ್ಲವೂ ಗೊತ್ತಾಗುತ್ತದೆ.

CONSTRUCTION OF NARAYANPUR AND ALMATTI DAMS

61. SRI M M. SAJJAN (Muddebihal) .—

Will the Minister of State Major Irrigation be pleased to state .—

(*a*) whether there is any yearwise phased programme to construct Narayanpar and Almatti dams under UKP, if so, the details of the programme for 1972–73.

(*b*) when the villages and the lands in this area would come under submergence ; the steps taken to rehabilitate the persons who would be affected by submergence.

(*c*) whether the agriculturists who would lose their entire holdings due to submeagence would be provided with lands?

SRI H. N. NANJE GOWDA (Minister of State for Major Irrigation) –

(*a*) Yes subject to availability of funds. During 1972–73 it is programmed to tackle portions of Narayanapur Dam Masonry non-spillway, concrete spillway and earthen embankments in the flanks and as portions of masonry spilway and non-spillway and earthen embankment of Almatti Dam.

(*b*) In the Ist Stage of project which is under execution the villages and the lands undor Narayanpur Reservior would come under submersion in 1975–76. Twentyfive Rehabilitation centres have been selected to rehabilitate the persons of 37 villages who would be affeeted by sub-mersion. The lands and the structures coming under sub-mersion are being valued and compensation as per rules will be paid to the persons.

In the 2nd stage of construct on of ihe project the villages and the lands under Almatti Dam would come undor submersion.

(*c*) Lands would be provided as far as possible.

ಶ್ರೀ ಎಂ. ಎಸ್. ಸಜ್ಜನ್ —ಈ ಡ್ಯಾಮಿನಲ್ಲಿನಲ್ಲಿತರ್ಕ ಗಾರ್ಜ್ ಪೋರ್ಷನ್ ವರ್ಕ್ ಏಕೆ ಇನ್ನೂ ಪ್ರಾರಂಭಮಾಡಲಿಲ್ಲ ?

ಶ್ರೀ ಎಚ್. ಎನ್. ನಂಜೇಗೌಡ .— ಪರು ಮಾಡಲಿಲ್ಲವೆಂದು ಹೇಳಿದರೆ, ಒಂದು ಕಡೆಯಿಂದ ಆಗುತ್ತಿದೆ. ಕೆಲಸಗಳು ಆಗಿಂದಾಗ್ಗೆ ಆಗುತ್ತಿವೆ. ಅಂದ ಮೇಲೆ ಏಕಕಾಲದಲ್ಲಿ ಹೇಗೆ ಎಲ್ಲ ಕೆಲಸಗಳನ್ನೂ ಪುರು ಮಾಡುವುದಕ್ಕಾಗುತ್ತದೆ ?

ಶ್ರೀ ಎಂ ಎಂ. ಸಜ್ಜನ್ —ಡ್ಯಾಂ ಎಷ್ಟು ಉದ್ದ ಇದೆಯೋ ಮತ್ತು ನದಿಯ ಪಾತ್ರದಲ್ಲಿ ಎಷ್ಟು ಕಟ ಬೇಕೋ ಅಷ್ಟು ಕಟ್ಟದೆ ನೀರು ನಿಲ್ಲುತ್ತದೆಯೇ ? ಮುಖ್ಯವಾದಂಥ ಭಾಗ ಗಾರ್ಜ್ ಪೋರಷನ್. ಇದರ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಅಂದ ಮೇಲೆ ಕೆಲಸಕ್ಕೆ ಬಾರದೇ ಇರುವ ಕೆಲಸಗಳನ್ನು ಏಕೆ ಮಾಡುತ್ತಿದ್ದಿರಿ ?

ಶ್ರೀ ಎಚ್. ಎನ್. ನಂಜೇಗೌಡ .—ಗಾರ್ಜ್ ಪೋರ್ಷನ್, ಪ್ಲಗ್‌ಮಾಡತಕ್ಕ ಕೆಲಸ ಬಹಳ ಮುಖ್ಯವಾದುದು ಅಣೆಕಟ್ಟು ನಿರ್ಮಾಣದಲ್ಲಿ ಕೆಲವಾರು ಸಣ್ಣ ಕೆಲಸಗಳು ಆದಮೇಲೆ ಇದನ್ನು ಮಾಡ ತಕ್ಕದ್ದು ಆದ್ದರಿಂದ ಇದನ್ನು ಮೊದಲು ಮಾಡುವುದಕ್ಕಾಗಲಿಲ್ಲ.

SRI RAJA PID NAIK .—May I know how much amount is advanced by the Central Government for the years 1972—73 and 1973 —74 for the Narayanpur and Alimatti Projects ?

SRI H. N. NANJE GOWDA .—Yesterday the Finance Minister has projected the details.

ಶ್ರೀ ಕಾಗೋಡು ತಿಮ್ಮಪ್ಪ —ರಾಜ್ಯಾಂಗ ತಿದ್ದುಪಡಿ **ಮಾಡಿದ ಮೇಲೆ** ಕಾಂಪೆನ್ ಸೇಷನ್‌ಗೆ ಬದ ಲಾಗಿ ಅಮೌಂಟು ಕೊಡಬೇಕೆಂದು ಮಾಡಿದ್ದಾರೆ. ಆದ್ದರಿಂದ ಅವರಿಗೆ ಅಮೌಂಟು ಕೊಡುತ್ತೀರೋ ಅಥವಾ ಕಾಂಪೆನ್‌ಸೇಷನ್ ಕೊಡುತ್ತೀರೋ ?

ಶ್ರೀ ಎಚ್. ಎನ್. ನಂಜೇಗೌಡ —ಆಕ್ಟ್‌ನಲ್ಲಿ ಏನು ಪ್ರಾವಿಷನ್ ಇದೆಯೋ ಅದನ್ನು ಅನುಸರಿಸಿ ಕೊಡುತ್ತೇವೆ. ಆ ರೀತಿಯಾಗಿ ಅಮೌಂಟ್ ಅವರಿಗೆ ಕೊಟ್ಟ ಮೇಲೆ ಅದನ್ನು ರದ್ದು ಮಾಡಬಹುದು.

ಶ್ರೀ ಎಂ ಎಸ್. ಕೃಷ್ಣನ್ .—(ಸಿ)ಗೆ ಉತ್ತರವಾಗಿ ಸಾಧ್ಯವಾದ ಮಟ್ಟಿಗೆ ಜಮೀನುಗಳನ್ನು ಒದಗಿಸಲಾಗುವುದು ಎಂದ ಹೇಳಿದೆ. ಇದರಿಂದ ಕೆಲವರಿಗೆ ಕೊಡದೇ ಇರಬಹುದು, ಮತ್ತೆ ಕೆಲವರಿಗೆ ಕೂಡ ಬಹುದೆಂದು ಅರ್ಥ ಬರುತ್ತದೆ. ಆದ್ದರಿಂದ ಎಲ್ಲರಿಗೂ ಜಮೀನು ಕೊಡುತ್ತೇವೆಂದು ಆಶ್ವಾಸನೆ ಯನ್ನು ಕೊಡುತ್ತೀರಾ?

ಶ್ರೀ ಎಚ್. ಎನ್. ನಂಜೇಗೌಡ.—ಜಮೀನು ಕೊಡುವುದು ಅವರ ತಿಳುವಳಿಕೆಗೆ ಬಿಟ್ಟದ್ದು. ಬೇಕಾದಷ್ಟು ಅಪ್ಲಿಯನ್ನು ಬಿಟ್ಟು ನೊಂದಿಂತಾರೆ. ಅಂತಹವರಿಗೆ ಕಾನೂನು ಪ್ರಕಾರ ಕೊಡಬೇಕಾದ ಪರಿಹಾರವನ್ನು ಕೊಡಲಾಗುತ್ತದೆ. ಒಂದು ವೇಳೆ ಆ ಪರಿಹಾರ ಸಾಲದೆ ಹೋದರೆ, ಅವರು ಕೋರ್ಟಿಗೆ ಹೋಗುತ್ತಾರೆ ಆ ಜಮೀನು ಸರ್ಕಾರದ ಗೋಮಾಳದಲ್ಲಿದ್ದರೆ ಸಾಧ್ಯವಾದಷ್ಟು ಇರುವುದನ್ನು ಕೊಡುತೇವೆ. ಇಲ್ಲದೇ ಇದ್ದುದನ್ನು ಕೊಡುವುದಕ್ಕೆ ಕಷ್ಟವಾಗಬಹುದು.

ಶ್ರೀ ಸಿ. ಎನ್. ಪಾಟೀಲ್.—ರೀಹ್ಯಾಬಿಲಿಟೆಷೇನ್ ಮಾಡುವ ದೃಷ್ಟಿಯಿಂದ ಕಾಂಪನ್ಸೇಷನ್ ಕೊಡುವಾಗ ಇನ್ನೂ ಹೆಚ್ಚಿನ ಪರಿಹಾರವನ್ನು ಕೊಡುತ್ತೀರಾ?

ಶ್ರೀ ಎಚ್. ಎನ್. ನಂಜೇಗೌಡ.—ಕಾನೂನು ಪ್ರಕಾರ ಅದನ್ನು ಕೊಡಬೇಕಾಗುತ್ತದೆ. ಒಂದು ವೇಳೆ ಲ್ಯಾಂಡ್ ಅಕ್ವಿಸಿಷನ್ ಆಕ್ಟ್ ಪ್ರಕಾರ ಅನ್ಯಾಯವೇನಾದರೂ ಆಗಿದ್ದರೆ, ಆಗ ಅವರು ಕೋರ್ಟಿಗೆ ಅಪೀಲು ಹಾಕಿಕೊಳ್ಳುತ್ತಾರೆ.

ಶ್ರೀ ಪಿ. ಎಂ. ಬಂಗಿ.—ಅಲಮಟ್ಟಿ ಅಣೆಕಟ್ಟು ನಿರ್ಮಾಣದಿಂದ ಎಷ್ಟು ಎಕರೆ ಜಮೀನು ಮುಳುಗಡೆಯಾಗುತ್ತದೆಂದು ನಿರೀಕ್ಷಣೆ ಮಾಡಿದ್ದೀರಿ?

ಶ್ರೀ ಎಚ್ ಎನ್. ನಂಜೇಗೌಡ.—ಒಟ್ಟು ೩೧,೮೩೩ ಎಕರೆಗಳು. ಮೊದಲನೆಯ ಹಂತದಲ್ಲಿ ನಾರಾಯಣಪುರ ಆಣೆಕಟ್ಟಿನಿಂದ ೩೭ ಹಳ್ಳಿಗಳು ಮುಳುಗಡೆಯಾಗುತ್ತವೆ. ೨೫ ಸೆಂಟರುಗಳಲ್ಲಿ ರಿಹ್ಯಾಬಿಲಿಟೇಟ್ ಮಾಡಬೇಕಾಗುತ್ತದೆ.

ಶ್ರೀ ಎಂ ಎಂ. ಸಜ್ಜನ್ —ಮುದ್ದೇಬಿಹಾಳ್ ತಾಲ್ಲೂಕಿನಲ್ಲಿ ಎಷ್ಟು ಹಳ್ಳಿಗಳು ಮುಳುಗಡೆಯಾಗುತ್ತವೆ, ಎಷ್ಟು ಎಕರೆ ಮುಳುಗಡೆಯಾಗುತ್ತದೆ?

ಶ್ರೀ ಎಚ್. ಎನ್. ನಂಜೇಗೌಡ.—೧೬ ಹಳ್ಳಿಗಳು ಮುಳುಗಡೆಯಾಗುತ್ತವೆ. ತದರೆ ಎಷ್ಟು ಎಕರೆ ಮುಳುಗಡೆಯಾಗುತ್ತದೆಂಬುದಕನ್ನು ಹೇಳುವುದಕ್ಕೆ ಪ್ಪಪಾಗುತ್ತದೆ

HIGH SCHOOLS RUN BY GOVERNMENT, LOCAL BODIES AND PRIVATE MANAGEMENT

273 SRI T. R. SHAMANNA (Fort).—Will the Minister for Education be pleased to state.

(*a*) the number of High Schools run by (i) Government (ii) Local Bodies (iii) Private Management in Mysore State during 1971-72:

(*b*) the number of students studying in each of the above High Schools,

(*c*) the expenditure incurred by the Government on each of the above High Schools,

(*d*) the number of students who have taken up S. S. L. C. examinations in 1971-72 in each of the above Schools,

(*e*) the number of candidates who succeeded in the S. S.L. C. Publice Examinations in each of the above High Schools?

[SRI K. H. PATIL.—(Minister for Agriculture and Forests) On behalf of, SRI A.R. BADARINARAYANA (Minister for Education) —

(*a*)	Government Schools	...	198
	Local Bodies Schools	...	504
	Private Schools	...	1,349
	Total	...	2,051

(*b*) 4,60,304 in High School Classes.

(c)	Government	...	Rs. 1,62,59,814
2.	Local Bodies	...	Rs 2,23,39,369
3.	Private School (Adided)		Rs. 6,96,26,025

(*d*) At the April 1972 Examination, the number of candidates